**OS 19/2023**

**DW-2:** ದೊಡ್ಡೀರಪ್ಪ

ದಿನಾಂಕಃ **21.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರವಾಗಿ ಶ್ರೀ ಡಿ.ಪಿ.ಆರ್. ವಕೀಲರಿಂದಃ**

1. ದಾವಾ ಸ್ವತ್ತಿನ ಸ.ನಂ. 30/1, 30/3, 95. ಸ.ನಂ. 30/1 ಒಟ್ಟು 3 ಎಕರೆ 14 ಗುಂಟೆ. ಸ.ನಂ. 30/3 ಒಟ್ಟು 3 ಎಕರೆ 18 ಗುಂಟೆ ಮತ್ತು ಸ.ನಂ. 95 ಎಷ್ಟು ವಿಸ್ತೀರ್ಣ ಇದೆ ಗೊತ್ತಿಲ್ಲ. ಸ.ನಂ. 95 ರ ಪೂರ್ವಕ್ಕೆಃ ವೆಂಕಟಪ್ಪ ರವರ ಜಮೀನು, ಪಶ್ಚಿಮಕ್ಕೆಃ ನೇಗಿ ತಿಮ್ಮಯ್ಯ, ಉತ್ತರಕ್ಕೆಃ ನೇಗಿ ತಿಮ್ಮಯ್ಯ ಮತ್ತು ದಕ್ಷಿಣಕ್ಕೆಃ ರಸ್ತೆ. ಸ.ನಂ. 30/1 ರ ಪೂರ್ವಕ್ಕೆಃ ನೇಗಿ ಕೊಂಡಯ್ಯ, ಪಶ್ಚಿಮಕ್ಕೆಃ ಸುಬ್ಬಯ್ಯಶೆಟ್ಟಿ, ಉತ್ತರಕ್ಕೆಃ ಚಿಕ್ಕೀರಪ್ಪ ಈಗ ಕರಿಯಣ್ಣ ಮತ್ತು ದಕ್ಷಿಣಕ್ಕೆಃ ಆಯ್ಯಣ್ಣ. ಸ.ನಂ. 30/3 ರ ಪೂರ್ವಕ್ಕೆಃ ಕೊಂಡಪ್ಪ ರವರ ಮಗಳು ವೆಂಕಟಲಕ್ಷ್ಮಮ್ಮ ಪಶ್ಚಿಮಕ್ಕೆಃ ಮಾರ್ಕಂಡೇಯ ಶಾಸ್ತ್ರೀ ಉತ್ತರಕ್ಕೆಃ ವಾದಿಗಳಿಗೆ ತಾತ ಮತ್ತು ದಕ್ಷಿಣಕ್ಕೆಃ ಕರಿಯಣ್ಣ. ಮೇಲ್ಕಂಡ ಸ್ವತ್ತುಗಳ ಅಕ್ಕಪಕ್ಕ ನಮ್ಮ ಸ್ವತ್ತು ಇರುತ್ತದೆ.

2. ನಮ್ಮ ಸ್ವತ್ತಿನ ಸ.ನಂ. 30. ಅದು ನಮ್ಮ ಭಾವನ ಹೆಸರಿನಲ್ಲಿ ಇದೆ ನನ್ನ ಹಸರಿನಲ್ಲಿ ಇಲ್ಲ. ನನ್ನ ಹೆಸರಿಗೆ ಯಾವುದೇ ಅಕ್ಕ ಪಕ್ಕದ ಸ್ವತ್ತು ಇಲ್ಲ. ಸ.ನಂ. 95 ಆವಲಪ್ಪ ಬಿನ್ ದೊಡ್ಡೀರಪ್ಪ ರವರು ಕ್ರಯಕ್ಕೆ ಪಡೆದಿರುವ ಸ್ವತ್ತು ಎಂದರೆ ಸರಿ. ಸ.ನಂ. 30 ರ ಸ್ವತ್ತನ್ನು ಆವಲಪ್ಪ ರವರು ಪೂರ್ವಿಕರ ಸ್ವತ್ತನ್ನು ಮಾರಿ ಖರೀದಿಸಿರುತ್ತಾರೆ. ಯಾವ ಸ.ನಂ. ಅನ್ನು ಮಾರಾಟ ಮಾಡಿ ಸ್ವತ್ತನ್ನು ಖರೀದಿಸಿದ್ದಾರೆಂದು ಗೊತ್ತಿಲ್ಲ. ಸ.ನಂ.30 ರ ಸ್ವತ್ತನ್ನು ಆವಿನಿ ಬೊಮ್ಮಯ್ಯ ರವರ ಹೆಂಡತಿಯರಾದ ದೊಡ್ಡಚಿತ್ತಕ್ಕ ಮತ್ತು ಸಣ್ಣ ಚಿತ್ತಕ್ಕ ರವರಿಂದ ಖರೀದಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸ್ವತ್ತನ್ನು ಖರೀದಿಸಿದ ನಂತರ ಆಸ್ತಿಯನ್ನು ಸ.ನಂ. 30/1 ಮತ್ತು 30/3 ಎಂದು ಆವಲಪ್ಪ ರವರು ಪೋಡು ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಸರ್ವೇ ಸ್ವತ್ತುಗಳು ಸ್ವಯಾರ್ಜಿತ ಸ್ವತ್ತುಗಳು ಎಂದರೆ ಅಣ್ಣ ತಮ್ಮದಿರು ಸ್ವತ್ತುಗಳನ್ನು ಮಾರಿ ವಿಭಾಗ ಮಾಡಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಸಾಕ್ಷಿಯು ಮುಂದುವರೆದು ಈಗ ಆ ಸ್ವತ್ತುಗಳು ಸ್ವಯಾರ್ಜಿತ ಎಂಬುದು ಸರಿ ಎಂದು ಉತ್ತರಿಸುತ್ತಾರೆ. ಆವಲಪ್ಪ ರವರು ಜೀವಂತ ಇರುವುದಿಲ್ಲ. ಆವಲಪ್ಪ ರವರು 2021 ರಲ್ಲಿ ಮೃತಪಟ್ಟಿರುತ್ತಾರೆ. ದಾವಾ ಷೆಡ್ಯೂಲ್ 1 ರಿಂದ 3 ರ ಸ್ವತ್ತುಗಳನ್ನು ವಾದಿಗೆ ಉಯಿಲಿನ ಮೂಲಕ ನೀಡಿದ್ದಾರೆ ಎಂದರೆ ಗೊತ್ತಿಲ್ಲ.

3. ದಿನಾಂಕಃ 25.05.2015 ರಂದು ಉಯಿಲನ್ನು ಬರೆದು ದಿನಾಂಕಃ 03.12.2021 ರಂದು ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಮೃತಪಟ್ಟಿರುವುದು ನಿಜ ಆದರೆ ಉಯಿಲಿನ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 2015 ನೇ ಸಾಲಿನಲ್ಲಿ ಆವಲಪ್ಪ ರವರಿಗೆ ಬುದ್ದಿ ಜ್ಞಾನ ಚೆನ್ನಾಗಿತ್ತು ಎಂದರೆ ಸಾಕ್ಷಿಯು ಕಣ್ಣು ಕಾಣಿಸುತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ಅವರು ಮರಣ ಹೊಂದುವ ಕಾಲಕ್ಕೆ 76 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿಯು 90 ವರ್ಷ ಆಗಿತ್ತು ಎಂದು ಉತ್ತರಿಸುತ್ತಾರೆ. ಅವರಿಗೆ 90 ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ದಾಖಲೆ ಇದೆಯಾ ಎಜಂದರೆ ಸಾಕ್ಷಿಯು ನನಗೆ 56 ವರ್ಷ ವಯಸ್ಸಾಗಿದ್ದು ಆವಲಪ್ಪ ರವರು ನನ್ನ ತಂದೆಯ ಚಿಕ್ಕಪ್ಪ ಎಂದು ಉತ್ತರಿಸುತ್ತಾರೆ. ಅವರಿಗೆ ಕೇವಲ 76 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಅವರ ಜೀವಿತ ಕಾಲದಲ್ಲಿ ವಾದಿ ಬೊಮ್ಮಲಿಂಗಪ್ಪ ರವರೇ ಆವಲಪ್ಪ ರವರನ್ನು ಪಾಲನೆ ಪೋಷಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆವಲಪ್ಪ ರವರು ಮೃತಪಟ್ಟ ನಂತರ ಬೊಮ್ಮಲಿಂಗಪ್ಪ ರವರು ಅವರ ತಿಥಿ ಕಾರ್ಯಗಳನ್ನು ಮಾಡಿರುತ್ತಾರೆ ಎಂದರೆ ಇಬ್ಬರೂ ಮಕ್ಕಳು ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ.

4. ಬೊಮ್ಮಲಿಂಗಪ್ಪ ಮತ್ತು ನಮ್ಮ ನಡುವೆ ಅನ್ಯೋನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು ಅವರಿಗೂ ವೈರತ್ವ ಇರುವ ಕಾರಣ ಅವರ ವಿರುದ್ಧ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು JDS ಪಕ್ಷದಿಂದ 3 ಬಾರಿ ಗ್ರಾಮಪಂಚಾಯಿತಿ ಸದಸ್ಯನಾಗಿದ್ದೇನೆ. ಬೊಮ್ಮಲಿಂಗಪ್ಪ ರವರು ಕಾಂಗ್ರೆಸ್ ಪಕ್ಷದವರು ಎಂದರೆ ಸರಿ. ರಾಜಕೀಯ

ದ್ವೇಷದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆವಲಪ್ಪ ರವರು ಊಯಿಲಿನಂತೆ ವಾದಿಗೆ ಸ್ವತ್ತನ್ನು ನೀಡಿದ್ದು ಸ್ವತ್ತು ಅವರ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ಆವಲಪ್ಪ ರವರು ಅನಕ್ಷರಸ್ಥರಾಗಿದ್ದು ಹೆಬ್ಬೆಟ್ಟಿನ ಗುರುತು ಮಾಡುತ್ತಿದ್ದರು ಎಂದರೆ ಸರಿ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.